ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ವಿಭಾಗ
ಜಿ.ಕೆ.ವಿ.ಕೆ., ಬೆಂಗಳೂರು–560065
* ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

ದಿನಾಂಕ: 12-08-2016

ಬೆಂಗಳೂರು ನಗರ ಜಿಲ್ಲೆಗೆ ಸೀಮಿತವಾಗಿದೆ

ಈ ವಾರದ ಮುನ್ಸೂಚನೆ (ದಿನಾಂಕ 13.08.16 –17.08.16 ವರೆಗೆ)

	13.08.16	14.08.16	15.08.16	16.08.16	17.08.16
ಮಳೆ (ಮಿ ಮಿ)	2	3	2	3	2
ಗರಿಷ್ಠ ಉಷ್ಣಾಂಶ(ಡಿ.ಸೆ.)	29	29	28	28	28
ಕನಿಷ್ಠ ಉಷ್ಣಾಂಶ (ಡಿ.ಸೆ.)	21	21	20	20	21
ಮೋಡ (ಪ್ರಮಾಣ)	7	7	5	7	7
ಅರ್ದ್ರತೆ ೭.೨೦ ಬೆ (ಶೇ)	89	88	87	84	86
ಅರ್ದ್ರತೆ ೨.೨೦ ಮ (ಶೇ)	51	55	56	55	56
ಗಾಳಿಯ ವೇಗ (ಕಿ.ಮಿ/ಗಂಟೆಗೆ)	13	15	17	19	17
ಗಾಳಿಯ ದಿಕ್ಕು (ಡಿಗ್ರಿ)	270	260	260	260	260

ಮುಂಬರುವ 5 ದಿನಗಳಲ್ಲಿ ಹಗುರ ಮಳೆಯಾಗುವ ಸಾಧ್ಯತೆಯಿದೆ . ದಿನದ ಗರಿಷ್ಠ ಉಷ್ಣಾಂಶ **28.0-29.0**^{0} ಸೆ ಮತ್ತು ಕನಿಷ್ಠ **20.0-21.0**^{0} ಸೆ ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **84-89 % %** ಇದ್ದು ಮಧ್ಯಾಹ್ನ **51-56 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **13-19** ಕಿ.ಮೀ. ವೇಗದಲ್ಲಿ ಬೀಸುವ ಸ0ಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

ಬೆಳೆಗಳು	ಹವಾಮಾನ ಆಧಾರಿತ ಕೃಷಿ ಸಲಹೆಗಳು
ಸಾಮಾನ್ಯ	➢ ಮುಂದಿನ ನಾಲ್ಕೈದು ದಿನಗಳಲ್ಲಿ ಮಳೆಯ ಮುನ್ಸೂಚನೆ ಕಡಿಮೆ, ತದನಂತರ ದೀರ್ಘಾವಧಿ ಹವಾಮಾನ ಮುನ್ಸೂಚನೆಯ ಪ್ರಕಾರ ಆಗಸ್ಟ್ ಎರಡನೆ ಮತ್ತು ಮೂರನೇ ವಾರದ ವರೆಗೂ ಮಳೆಯ ಕೊರತೆ ಕಂಡುಬರುವ ಸಾಧ್ಯತೆ ಇರುವುದರಿಂದ ಮುಂಗಾರು ಬಿತ್ತನೆಯನ್ನು ಇನ್ನು 2 ವಾರಗಳ ಕಾಲ ಮುಂದೂಡುವುದು ಸೂಕ್ತ. ➢ ಮೇ, ಜೂನ್ ಮತ್ತು ಜುಲೈ ತಿಂಗಳಲ್ಲಿ ಸಾಧಾರಣಕ್ಕಿಂತ ಹೆಚ್ಚು ಮಳೆಯಾಗಿರುವ ಕಾರಣ ಹರಿದು ಹೋಗುವ ಮಳೆ ನೀರನ್ನು ಕೃಷಿ ಹೊಂಡ, ನಾಲಾಬದು, ನಾಲಾ ಹೊಂಡಗಳಲ್ಲಿ ಶೇಖರಣೆಯಾಗಿರುತ್ತದೆ. ಈ ಶೇಖರಣಾ ರಚನೆಗಳಲ್ಲಿ ಇರುವಂತಹ ನೀರನ್ನು ಸದ್ಬಳಕೆ ಮಾಡಿಕೊಂಡು ಬೆಳೆ ರಕ್ಷಣಾತ್ಮಕ ನೀರಾವರಿಯನ್ನು ಒಂದು ಬಾರಿ ಕೊಡುವುದು. ➢ ಗಾಳಿಯ ವೇಗ ಹೆಚ್ಚಾಗಿರುವುದರಿಂದ ಬಾಳೆ ಮತ್ತು ತರಕಾರಿ ಬೆಳೆಗಳಿಗೆ ರಕ್ಷಣೆ ಕ್ರಮಗಳನ್ನು ಅನುಸರಿಸಿ.
ರಾಗಿ	➢ ಆಗಸ್ಟ್ ತಿಂಗಳಲ್ಲಿ ಬಿತ್ತನೆ ಮಾಡಬೇಕಾದ ರಾಗಿ ತಳಿಗಳು: ಇಂಡಾಫ್–5, 9, ಜಿ.ಪಿ.ಯು–26,28, 45,48 ಮತ್ತು 66, ಹೆಚ್.ಆರ್.–911, ಎಂ.ಎಲ್–365, ಪಿ.ಆರ್–202 ➢ ಬಿತ್ತನೆಗೆ ಭೂಮಿಯನ್ನು ಸಿದ್ಧಪಡಿಸಿಕೊಳ್ಳಿ ಮತ್ತು 15 ದಿನಗಳ ಮುಂಚೆ ಕೊಟ್ಟಿಗೆ ಗೊಬ್ಬರವನ್ನು ಭೂಮಿಗೆ ಸೇರಿಸಿ.
ಮೆಕ್ಕೆಜೋಳ	➢ ತೇವಾಂಶದ ಸಂರಕ್ಷಣೆಗಾಗಿ ಇರುವಂತಹ ಕಳೆಯನ್ನು ನಿರ್ವಹಣೆ ಮಾಡಿ ಕಿತ್ತಂತಹ ಕಳೆಯನ್ನು ಭೂಮಿಗೆ ಹೊದಿಕೆ ಮಾಡಬೇಕು. ➢ ಬಿತ್ತಿದ 25-30 ದಿನಗಳ ಬೆಳೆಯಲ್ಲಿ ಅಂತರ ಬೇಸಾಯ ಮಾಡಿ ಕಳೆಗಳನ್ನು ನಿಯಂತ್ರಿಸಬೇಕು ಮತ್ತು ಮೇಲೆ ತಿಳಿಸಿರುವ ಬೇಸಾಯ ಕ್ರಮಗಳ ಜೊತೆಗೆ, ಸಾಲುಗಳ ಮಧ್ಯದಲ್ಲಿರುವ ಮಣ್ಣನ್ನು ಗಿಡದ ಬುಡಕ್ಕೆ ಹಾಕುವುದರಿಂದ ಭೂಮಿಯು ದಿಂಡು ಸಾಲಾಗಿ ಪರಿವರ್ತನೆಯಾಗುತ್ತದೆ ಇದರಿಂದ ಗಿಡಗಳಿಗೆ ಹೆಚ್ಚು ತೇವಾಂಶ ಸಿಗುವಂತಾಗುತ್ತದೆ. ➢ ಕಾಂಡಕೊರಕದ ಹುಳುವಿನ ಹತೋಟಿಗೆ ಕ್ವಿನಾಲ್‌ಫಾಸ್–25 ಇ.ಸಿ. ಕೀಟನಾಶಕವನ್ನು 2 ಮಿ.ಲೀ/ಪ್ರತಿ ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಿ. ಅಥವಾ ಕ್ಲೋರೋಪೈರಿಫಾಸ್–20 ಇ.ಸಿ. ಕೀಟನಾಶಕವನ್ನು 2

	ಮಿ.ಲೀ/ಪ್ರತಿ ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಿ.
ತೊಗರಿ	➢ ತೇವಾಂಶದ ಸಂರಕ್ಷಣೆಗಾಗಿ ಇರುವಂತಹ ಕಳೆಯನ್ನು ನಿರ್ವಹಣೆ ಮಾಡಿ ಕಿತ್ತಂತಹ ಕಳೆಯನ್ನು ಭೂಮಿಗೆ ಹೊದಿಕೆ ಮಾಡಬೇಕು. ➢ ಅಂತರ ಬೇಸಾಯ ಮಾಡಿ ಕಳೆಗಳನ್ನು ನಿಯಂತ್ರಿಸಬೇಕು ಮತ್ತು ಸಾಲುಗಳ ಮಧ್ಯದಲ್ಲಿರುವ ಮಣ್ಣನ್ನು ಗಿಡದ ಬುಡಕ್ಕೆ ಹಾಕುವುದರಿಂದ ಭೂಮಿಯು ದಿಂಡು ಸಾಲಾಗಿ ಪರಿವರ್ತನೆಯಾಗುತ್ತದೆ ಇದರಿಂದ ಗಿಡಗಳಿಗೆ ಹೆಚ್ಚು ತೇವಾಂಶ ಸಿಗುವಂತಾಗುತ್ತದೆ. ➢ ಎಲ್ಲೆಲ್ಲಿ ಶಿಫಾರಿಸಿಗಿಂತ ಹೆಚ್ಚು ಗಿಡಗಳ ಸಂಖ್ಯೆ ಇದೆಯೋ ಅಲ್ಲಿ ಬೆಳೆ ಸಸಿಗಳ ಸಂಖ್ಯೆಯನ್ನು ಕಡಿಮೆಗೊಳಿಸುವುದರಿಂದ ಮಣ್ಣಿನ ತೇವಾಂಶದ ಸದ್ಬಳಕೆ ಮಾಡಿಕೊಳ್ಳಬಹುದು. ➢ ಕಿತ್ತಂತಹ ಕಳೆ ಮತ್ತು ಬದುಗಳಲ್ಲಿ ಬೆಳೆದಿರುವ ಗ್ಲಿರೀಸಿಡಿಯ (ಹಸಿರೆಲೆ ಗೊಬ್ಬರದ ಗಿಡ) ಸೊಪ್ಪನ್ನು ಉಪಯೋಗಿಸಿಕೊಂಡು ಸಾಲುಗಳ ಮಧ್ಯದಲ್ಲಿ ಭೂ–ಹೊದಿಕೆಯಾಗಿ ಹರಡುವುದು.
ಶೇಂಗಾ/ನೆಲಗಡಲೆ	➢ ಅಂತರ ಬೇಸಾಯ ಮಾಡಿ ಕಳೆಗಳನ್ನು ನಿಯಂತ್ರಿಸಬೇಕು.
ಅಲಸಂದೆ ಮತ್ತು ಅವರೆ	➢ ಅಲಸಂದೆ ಬೆಳೆಯಲ್ಲಿ ಸಿ–152 ಮತ್ತು ಕೆ.ಎಮ್–5, ಟಿ.ವಿ.ಎಕ್ಸ್–944. ಅಥವಾ ತರಕಾರಿಗಾಗಿ ಪಿ.ಕೆ.ಬಿ–4 ತಳಿಯನ್ನು ಆಯ್ಕೆ ಮಾಡಿಕೊಳ್ಳಬಹುದು. ➢ ಅವರೆ: ಎಚ್.ಎ–3 ಮತ್ತು 4 ತಳಿಯನ್ನು ಆಯ್ಕೆ ಮಾಡಿಕೊಳ್ಳಬಹುದು.
ಜಾನುವಾರು	
ಸಾಮಾನ್ಯ	➢ ಜಾನುವಾರು, ರೇಷ್ಮೆ ಹಾಗೂ ಕೋಳಿ ಸಾಕಣೆ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು.
ಹೈನುಗಾರಿಕೆ	➢ **ನೆರಡಿ ರೋಗ:** ಜ್ವರ, ಕೆಲವೊಮ್ಮೆ ಇದ್ದಕ್ಕಿದ್ದ ಹಾಗೆ ದನಗಳು ಸಾಯುವುದು, ಮೇವು ಬಿಡುವುದು, ಹೆಚ್ಚು ನಾಡಿ ಬಡಿತ, ಉಸಿರಾಟ, ಸಾವಿನ ಸಮಯದಲ್ಲಿ ಮೂಗು, ಬಾಯಿ ಮತ್ತು ಗುದದ್ವಾರದಿಂದ ರಕ್ತಸ್ರಾವವಾಗುತ್ತದೆ. ಇದರ ಹತೋಟಿಗೆ ಪ್ರತಿ ವರ್ಷ **ಜುಲೈ/ಆಗಸ್ಟ್** ತಿಂಗಳಲ್ಲಿ ಈ ರೋಗದ ಲಸಿಕೆಯನ್ನು ಕೊಡಿಸಿ ತಡೆಗಟ್ಟಬಹುದು. ➢ ಕರು ಹಾಗೂ ಗರ್ಭಿಣಿ ಹಸು ಮತ್ತು ಎಮ್ಮೆಗಳಿಗೆ ಜಂತುನಾಶಕ ಔಷದಿಯನ್ನು ಪಶುವೈದ್ಯರ ಮಾರ್ಗದರ್ಶನದಲ್ಲಿ ಕುಡಿಸಬೇಕು. ➢ ಹಾಲು ಕೊಡುವ ಪ್ರಾಣಿಗಳಿಗೆ ಅವು ಕೊಡುವ ಹಾಲಿನ ಆದಾರದ ಮೇಲೆ ಆಹಾರವನ್ನು ಕೋಡಬೇಕು.

ನೋಡಲ್ ಅಧಿಕಾರಿ:
ಕೃ.ವಿ.ವಿ, ಜಿ.ಕೆ.ವಿ.ಕೆ
ಬೆಂಗಳೂರು